ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಅರಣ್ಯ ಭೂ ಪ್ರದೇಶದ ವಿಸ್ತೀರ್ಣ.

೨೧೪೦(೨೬೭೧)

ಶ್ರೀ ನಾರಾಯಣ ಸ್ವಾಮಿ ಎ.(ಆನೇಕಲ್): ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಅರಣ್ಯ ಭೂಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು?

ಆ) ಈ ಪ್ರದೇಶದಿಂದ ನಾಗರಿಕ ವಾಸಸ್ಥಳಗಳಿಗೆ ಕಾಡಾನೆಗಳ ಪ್ರವೇಶದಿಂದ ಸಾರ್ವಜನಿಕರ ಪ್ರಾಣ, ಆಸ್ತಿ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಕಾಡಾನೆಗಳ ಹಾನಿಯನ್ನು ತಡೆಯಲು ಕಾಡಿನ ಸರಹದ್ದಿನಲ್ಲಿ ರಕ್ಷಣಾ ಕಂದಕಗಳನ್ನು ತೆಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಕಂದಕಗಳ ಯೋಜನೆಗೆ ೧೯೯೭-೯೮, ೯೮-೯೯, ೯೯-೨೦೦೦ರ ಸಾಲಿಗೆ ಬಿಡುಗಡೆಯಾದ ಹಣವೆಷ್ಟು?

ಶ್ರೀ ಕೆ.ಎಚ್.ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ೧೦೪.೨೭ ಚದರ ಕಿಲೋಮೀಟರ್.

ಆ) ಹೌದು.

ಇ) ಹೌದು.

ಈ) ೧೯೯೭-೯೮ ರೂ. ೧,೨೮,೦೦೦.೦೦

೧೯೯೮-೯೯ ರೂ.೩,೯೦,೦೦೦.೦೦

೧೯೯೯-೨೦೦೦ ರೂ.೬೨,೫೭,೦೦೦.೦೦

ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಹುದ್ದೆಗಳು.

೨೧೪೧(೨೬೭೨)